ಸಂಬಂಧವೇನು? ಸರಿ! ಏನಾದರೆ ನನಗೇನು? ನಾನು ಬಂದ ಕೆಲಸ ನೋಡಿಕೊಂಡು ಹೋದರೆ ಆಯಿತು. ಟೆಸ್ಟ್‌ಗಳು ಮುಗಿದು ನನ್ನ ಕಿಡ್ನಿ ಸರಿಹೋಗುತ್ತೆ ಅಂದ್ರೆ ಸಾಕು. ತನಗೆ ಬರಬೇಕಾದ ದುಡ್ಡನ್ನು ಮೊದಲೇ ತೆಗೆದುಕೊಂಡು ಬಿಡಬೇಕು.' ಆಲೋಚಿಸುತ್ತಿದ್ದ ಸತ್ಯವತಿ ತನ್ನ ನಿರ್ಧಾರವನ್ನು ಗಟ್ಟಿಮಾಡಿದಳು.

ಒಂದು ಗಂಟೆಯ ನಂತರ ದುರ್ಗ ಕಾಫೀ ಕಪ್ಪಿನೊಡನೆ ಬಂದಳು.

"ನಿದ್ದೆ ಮಾಡ್ತಿದೀರಾ ಅಕ್ಕಾ..." ಆಪ್ಯಾಯತೆಯಿಂದ ಕೇಳಿದಳು.

"ಇಲ್ಲಮ್ಮಾ ಏನೋ ಯೋಚನೆ ಮಾಡ್ತಿದ್ದೆ."

"ಏನು ಆಲೋಚನೆ ಮಾಡ್ತಿದ್ರಿ?" ಮುಗುಳ್ನಗುತ್ತಾ ಕೇಳಿದಳು.

"ನೀನು ಕೊಟ್ಟಿದ್ದ ಆಲ್ಬಮ್‌ಗಳಲ್ಲಿದ್ದ ಫೋಟೊಗಳನ್ನೆಲ್ಲ ನೋಡ್ದೆ. ಮಾಧವಯ್ಯನವರ ಪಕ್ಕದಲ್ಲಿದ್ದವರು ಯಾರು? ಅವರು ಮಾಧವಯ್ಯನವರಿಗೆ ಏನಾಗ್ತಾರೆ?"

"ಅವರೇ ನಮ್ಮ ಅಮ್ಮನವರು. ಇಂದ್ರಾಣಿ ಅಮ್ಮ. ಮಾಧವರಾಯರ ಪತ್ನಿ!..."

"ಆಂದ್ರೆ ನಿಮ್ಮ ಅಮ್ಮ?..."

"ನಂಗೆ ಮಾತ್ರವಲ್ಲ. ನೀನು ನೋಡಿದ ಫೋಟೊಗಳಲ್ಲಿರೋ ಎಲ್ಲರಿಗೂ ಅವರೇ ಅಮ್ಮ... ಅಪ್ಪ..."

"ಅಂದ್ರೆ?..."

"ಅವರಿಗೆ ಮಕ್ಕಳಿಲ್ಲ. ಮಕ್ಕಳಾಗದಂತೆ ಆಪರೇಷನ್ ಮಾಡಿಸಿಕೊಂಡಿದ್ರು ಅಂತ ಎಲ್ರೂ ಹೇಳ್ತಾರೆ. ನನ್ನಂಥ ಅನಾಥ ಬೀದಿಮಕ್ಕಳಿಂದ ಹಿಡಿದು ಹಣ್ಣು ಹಣ್ಣು ಮುದುಕರವರೆಗೆ ಎಲ್ರಿಗೂ ಅವರೇ ಅಮ್ಮ ಅಪ್ಪ!..'' ಹಾಗೆ ಹೇಳುವಾಗ ಅವಳ ಗಂಟಲು ಕಟ್ಟಿತ್ತು.

"ಎಷ್ಟೋ ಜನ ರೋಗಿಗಳಿಗೆ, ವೃದ್ಧರಿಗೆ, ದಿಕ್ಕಿಲ್ಲದ ಅನಾಥರಿಗೆ ದಿಕ್ಕಾಗಿ ಸೇವೆಗೈದ ಅಮ್ಮ ತನ್ನ ಆರೋಗ್ಯದ ಬಗ್ಗೆ ಗಮನಕೊಡಲಿಲ್ಲ. ಅದರ ಪರಿಣಾಮ ಈಗ ಅವರ ಎರಡು ಕಿಡ್ನಿ ಹಾಳಾಗಿವೆ. ಇವತ್ತು ಸಾವು ಬದುಕಿನ ನಡುವೆ ಒದ್ದಾಡ್ತಿದಾರೆ. ಅವರ ಆರೋಗ್ಯ ಸುಧಾರಿಸದಿದ್ರೆ ಎಷ್ಟು ಜನರ

